**ಪಿ. ಡಬ್ಲ್ಯೂ.1** **OS 457/2021**

# <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ</u>

## ದಿನಾಂಕಃ13.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಹೊನ್ನಗಂಗಪ್ಪ<br>70 ವರ್ಷ<br>ವ್ಯವಸಾಯ<br>ದೊಡ್ಡಗುಣಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## <u>ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ.BSM ರವರಿಂದ</u>

ಸ.ನಂ.12/5 ರ ಒಟ್ಟು ವಿಸ್ತೀರ್ಣ 7 ಎಕರೆ 2 ಗುಂಟೆ ಇರುತ್ತದೆ. ಸದರಿ 7 ಎಕರೆ 2 ಗುಂಟೆ ಜಮೀನು ದಾನಪ್ಪ ಬಿನ್ ರುದ್ರಪ್ಪ ಎನ್ನುವವರಿಗೆ ಸೇರಿತ್ತು. ನಂತರ ಅ ಜಮೀನನ್ನು ರುದ್ರಪ್ಪನ ಮಕ್ಕಳಾದ ಚಿಕ್ಕರುದ್ರಪ್ಪ, ವೀರಭದ್ರಪ್ಪ, ಮರಳುಸಿದ್ದಪ್ಪ ವಿಭಾಗ ಮಾಡಿಕೊಂಡರು, ಅದರಂತೆ ಚಿಕ್ಕರುದ್ರಪ್ಪನಿಗೆ ಸ.ನಂ.12/5 ರಲ್ಲಿ 3 ಎಕರೆ 4 ಗುಂಟೆ ಜಮೀನು, ಮರಳು ಸಿದ್ದಪ್ಪನಿಗೆ 3 ಎಕರೆ 8 ಗುಂಟೆ ಜಮೀನು ಅವರ ಭಾಗಕ್ಕೆ ಬಂದಿತ್ತು, ವೀರಭದ್ರಯ್ಯನಿಗೆ ಎಷ್ಟು ಜಮೀನು ಬಂದಿತ್ತು ಎಂದು ನನಗೆ ಗೊತ್ತಿಲ್ಲ.

ದಾವಾಸ್ವತ್ತನಲ್ಲಿ ನನ್ನ ತಂದೆ ದಿಃ 24.03.1972 ರಂದು 1 ಎಕರೆ ಜಮೀನನ್ನು ಹಾಗೂ ದಿಃ 24.10.1972 ರಂದು 2 ಎಕರೆ ಜಮೀನನ್ನು ಷಡಾಕ್ಷರಯ್ಯ ರವರಿಂದ ಖರೀದಿ ಮಾಡಿದ್ದರು. ದಿಃ 24.03.1972 ರಲ್ಲಿ ಖರೀದಿ ಮಾಡಿದ 1 ಎಕರೆ ಜಮೀನಿನ ಚಕ್ಕುಬಂದಿ ನನಗೆ ಗೊತ್ತು ಪೂರ್ವಕ್ಕೆ – ಅನ್ನಪೂರ್ಣಮ್ಮ, ಪಶ್ಚಿಮಕ್ಕೆ – ಮರಳಸಿದ್ದಪ್ಪ, ಉತ್ತರಕ್ಕೆ – ಪಂಚಾಕ್ಷರಯ್ಯ, ದಕ್ಷಿಣಕ್ಕೆ – ಎತ್ತಿನಹೊಳೆ ಇರುತ್ತದೆ. ದಾವಾಸ್ವತ್ತಿನ 3 ಎಕರೆ ಪೈಕಿ 38 ವರೆ ಗುಂಟೆ ಎತ್ತಿನಹೊಳೆಗೆ ಭೂಸ್ವಾಧಿನವಾಗಿದೆ.

**ಪಿ. ಡಬ್ಲ್ಯೂ.1** **OS 457/2021**

ಪ್ರತಿವಾದಿಗೆ ಸ.ನಂ.12/5 ರಲ್ಲಿ 14 ಗುಂಟೆ ಜಮೀನು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸರಿ. ಪ್ರತಿವಾದಿಗೆ ಸೇರಿದ 14 ಗುಂಟೆ ಜಮೀನಿನ ಪೈಕಿ 5 ಗುಂಟೆ ಜಮೀನು ಎತ್ತಿನಹೊಳೆಗೆ ಭೂಸ್ವಾಧೀನವಾಗಿದೆ ಎಂದರೆ ಸರಿ. ಪ್ರತಿವಾದಿಯ ಪಶ್ಚಿಮದ ಕಡೆಯ 5 ಗುಂಟೆಯ ಜಮೀನು ಉತ್ತರ ದಕ್ಷಿಣವಾಗಿ ಭೂಸ್ವಾಧೀನವಾಗಿದೆ. ಉಳಿದ 9 ಗುಂಟೆ ಜಮೀನು ಪ್ರತಿವಾದಿಯ ಹೆಸರಿನಲ್ಲಿ ಇದ್ದು ಖಾತೆ ಪಹಣಿ ಕೂಡ ಅವರ ಹೆಸರಿನಲ್ಲಿ ಇದೆ ಹಾಗೂ ಅವರು 9 ಗುಂಟೆಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ.2/5 ರಲ್ಲಿ 3 ಎಕರೆ ಪೈಕಿ 38 ವರೆ ಜಮೀನು ಯಾವ ದಿಕ್ಕಿನಲ್ಲಿ ಭೂಸ್ವಾಧೀನ ವಾಗಿದೆ ಎಂದು ಹೇಳಲು ನಾನು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು)**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ.

**ಪಿ. ಡಬ್ಲ್ಯೂ.1** **OS 457/2021**

B/C present.

L?C for accused partly cross examined PW1 and prays time for further cross.

For further cross of Pw1.

Call on.

ಪಿ. ಡಬ್ಲ್ಯೂ.1 OS 457/2021